<u>ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ, ತರೀಕೆರೆ</u>

ಸಿ.ಸಿ.ಸಂಖ್ಯೆ.1167/2023

:ಉಪಸ್ಥಿತರುಃ

ಶ್ರೀ ಶಿವಕುಮಾರ್.ಆರ್, ಬಿ.ಎ.ಎಲ್. ಎಲ್ಎಲ್.ಬಿ.

ಪಿರ್ಯಾದುದಾರರುಃ ಬೀರೂರು ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರುಃ

**1.** ಶ್ರೀಮತಿ ಶಮಂತಕಮಣಿ,
ಕೋಂ ಶ್ರೀ ರಾಜೇಶ .ಡಿ.ಜಿ,
ವಯಸು 27 ವರ್ಷಗಳು,
ವಾಸಃ ಮೆನಕತ್ತೂರು ಗ್ರಾಮ,
ಬಾಣಾವರ ಹೋಬಳಿ,
ಅರಸೀಕೆರೆ ತಾಲ್ಲೂಕು
ಹಾಸನ ಜಿಲ್ಲೆ.

**2.** ಶ್ರೀ ಯತೀಶ್.ಎಲ್,
ಬಿನ್ ಶ್ರೀ ಲಿಂಗಪ್ಪ,
ವಯಸು 53 ವರ್ಷಗಳು,
ವಾಸ ಃ ಕೊಟಿಗೇನಹಳ್ಳಿ,
ಕಿಬ್ಬನಹಳ್ಳಿ ಹೋಬಳಿ,
ನಲ್ಲೀಕೆರೆ, ತುಮಕೂರು ಜಿಲ್ಲೆ

## :<u>ದೋಷಾರೋಪಣೆ:</u>

ಶ್ರೀ ಶಿವಕುಮಾರ್.ಆರ್., ಬಿ.ಎ.ಎಲ್., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿತರಾದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 25.09.2022 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಬೀರೂರು ಪೊಲೀಸ್ ಠಾಣಾ ಸರಹದ್ದಿನ ದೊಡ್ಡಬೋಕಿಕೆರೆ ಗ್ರಾಮದ ಚಾಸಾ-2 ಶ್ರೀಮತಿ ಶಾರದಮ್ಮ ರವರ ಮನೆಯಲ್ಲಿ ಚಾಸಾ-1 ಶ್ರೀ ಡಿ.ಜಿ. ರಾಜೇಶ ಮತ್ತು ಮೂರುವರೆ ವರ್ಷದ ಮಗು ಹೃತ್ವಿಕ್ ಹಾಗೂ ಚಾಸಾ-2 ರವರು ಮನೆಯಲ್ಲಿರುವಾಗ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-2 ರವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿದ್ದು, ಆದಕಾರಣ 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.448 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಸಮಾನ ಉದ್ದೇಶದಿಂದ ಮುಂದುವರಿದು, 1 ಮತ್ತು 2 ನೇ ಆರೋಪಿಯಾದ ನೀವು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ 1 ಮತ್ತು 2 ನೇ

ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಸಮಾನ ಉದ್ದೇಶದಿಂದ ಮುಂದುವರಿದು, 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-2 ರವರಿಗೆ ಕೈಯಿಂದ ಮೈಕೈಗೆ ಮತ್ತು ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆದಕಾರಣ 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : **19.10.2023**

ಸಹಿ/-
(ಶಿವಕುಮಾರ್.ಆರ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ತರೀಕೆರೆ.